# ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ:- ನೂತನವಾಗಿ ಸೃಜಿಸಲಾಗಿರುವ ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆಯ ವೃತ್ತ ಕಛೇರಿಗಳು, ವಿಭಾಗಗಳು ಹಾಗೂ ಉಪ ವಿಭಾಗಗಳಿಗೆ ಪೀಠೋಪಕರಣ, ಲೇಖನ ಸಾಮಗ್ರಿ ಹಾಗೂ ಕಛೇರಿ ವೆಚ್ಚಗಳಿಗಾಗಿ 2014-15ನೇ ಸಾಲಿಗೆ ಅನುದಾನ ಬಿಡುಗಡೆ ಮಾಡುವ ಬಗ್ಗೆ.

ಓದಲಾಗಿದೆ:- 1) ಸರ್ಕಾರದ ಆದೇಶ ಸಂ.ಗ್ರಾಅಪ/56/ಗ್ರಾನೀಸ(2)2013, ದಿನಾಂಕ: 4-3-2014
2) 2014-15ನೇ ಸಾಲಿನಲ್ಲಿ ಆಯವ್ಯಯದಡಿ ಒದಗಿಸಿರುವ ಅನುದಾನ
3) ಸರ್ಕಾರದ ಆದೇಶ ಸಂ.ಗ್ರಾಕುನೀ/38/ನೈಇ/2014, ದಿನಾಂಕ: 18-10-2014.

**ಪ್ರಸ್ತಾವನೆ:**

ಮೇಲೆ ಓದಲಾದ (1) ಮತ್ತು (2) ರ ಆದೇಶದಲ್ಲಿ ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆಯ ಕಾರ್ಯಾಚರಣೆ ಮತ್ತು ನಿರ್ವಹಣೆಗಾಗಿ 2014-15ನೇ ಸಾಲಿನ ಆಯವ್ಯಯದಲ್ಲಿ ನೀರು ಸರಬರಾಜು ಮತ್ತು ನೈರ್ಮಲ್ಯ ಇಂಜಿನಿಯರಿಂಗ್ ಸ್ಥಾಪನೆ ಬಗ್ಗೆ ಲೆಕ್ಕಶೀರ್ಷಿಕೆ "2215-01-001-1-03" ಅಡಿ ರೂ.200.00 ಲಕ್ಷ ಅನುದಾನ ಒದಗಿಸಲಾಗಿದೆ ಹಾಗೂ ಓದಲಾದ (3) ರ ಆದೇಶದಲ್ಲಿ ಸದರಿ ಲೆಕ್ಕ ಶೀರ್ಷಿಕೆಯಡಿ ಒದಗಿಸಿರುವ ಅನುದಾನವನ್ನು ಆಯುಕ್ತರು, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆ ಇವರಿಗೆ ಖಜಾನೆಯಿಂದ ಸೆಳೆಯಲು ಮಂಜೂರಾತಿ ನೀಡಿ ಆದೇಶಿಸಲಾಗಿರುತ್ತದೆ.

ಈ ಸಂಬಂಧ ಹೊಸ ಇಲಾಖೆಯಡಿ ಸೃಜಿಸಲಾಗಿರುವ ವೃತ್ತ ಕಛೇರಿಗಳು, ವಿಭಾಗಗಳು ಹಾಗೂ ಉಪ ವಿಭಾಗಗಳ ಪೀಠೋಪಕರಣ, ಲೇಖನ ಸಾಮಗ್ರಿ ಇನ್ನಿತರೆ ಕಛೇರಿ ವೆಚ್ಚಗಳಿಗಾಗಿ ಅನುದಾನ ಬಿಡುಗಡೆ ಮಾಡಲು ಸರ್ಕಾರವು ನಿರ್ಧರಿಸಿದೆ. ಆದ್ದರಿಂದ ಈ ಆದೇಶ.

## ಸರ್ಕಾರದ ಆದೇಶ ಸಂ.ಗ್ರಾಅಪ/38/ಗ್ರಾಕುನೀ&ನೈಇ/2014, ದಿನಾಂಕ:25-03-2015

ಪ್ರಸ್ತಾವನೆಯಲ್ಲಿ ವಿವರಿಸಿದಂತೆ ರಾಜ್ಯದಲ್ಲಿ ಹೊಸದಾಗಿ ಸೃಜಿಸಲಾಗಿರುವ ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆಯ ವೃತ್ತ ಕಛೇರಿಗಳು, ವಿಭಾಗಗಳು ಹಾಗೂ ಉಪ ವಿಭಾಗಗಳ ಸ್ಥಾಪನಾ ವೆಚ್ಚ ಹಾಗೂ ಪೀಠೋಪಕರಣ, ಲೇಖನ ಸಾಮಗ್ರಿ ಮತ್ತು ಇನ್ನಿತರೆ ಕಛೇರಿ ವೆಚ್ಚಗಳಿಗಾಗಿ ಈ ಕೆಳಕಂಡಂತೆ <u>ರೂ.72.60 ಲಕ್ಷ</u> (ಎಪ್ಪತ್ತೆರಡು ಲಕ್ಷ ಮತ್ತು ಅರವತ್ತು ಸಾವಿರ ರೂಪಾಯಿಗಳು ಮಾತ್ರ) ಅನುದಾನವನ್ನು ಬಿಡುಗಡೆ ಮಾಡಲು ಸರ್ಕಾರವು ಹರ್ಷಿಸುತ್ತದೆ.

*(ರೂ. ಲಕ್ಷಗಳಲ್ಲಿ)*

| ಕ್ರ ಸಂ. | ಕಛೇರಿಯ ಹೆಸರು | ಬಿಡುಗಡೆ ಮಾಡಿರುವ ಅನುದಾನ |
|---|---|---|
| 1 | ಅಧೀಕ್ಷಕ ಅಭಿಯಂತರರು, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವೃತ್ತ, ಬೆಳಗಾಂ ವ್ಯಾಪ್ತಿಯ ಎಲ್ಲಾ ವಿಭಾಗ ಮತ್ತು ಉಪ ವಿಭಾಗಗಳಿಗೆ | 12.60 |
| 2 | ಅಧೀಕ್ಷಕ ಅಭಿಯಂತರರು, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವೃತ್ತ, ಮೈಸೂರು ವ್ಯಾಪ್ತಿಯ ಎಲ್ಲಾ ವಿಭಾಗ ಮತ್ತು ಉಪ ವಿಭಾಗಗಳಿಗೆ | 10.00 |
| 3 | ಕಾರ್ಯಪಾಲಕ ಅಭಿಯಂತರರು, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗ, ಬೆಂಗಳೂರು (ಗ್ರಾಮಾಂತರ) ವ್ಯಾಪ್ತಿಯ ಎಲ್ಲಾ ಉಪ ವಿಭಾಗಗಳಿಗೆ | 25.00 |
| 4 | ಕಾರ್ಯಪಾಲಕ ಅಭಿಯಂತರರು, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗ, ಬೆಂಗಳೂರು (ನಗರ) ವ್ಯಾಪ್ತಿಯ ಎಲ್ಲಾ ಉಪ ವಿಭಾಗಗಳಿಗೆ | 25.00 |
| | ಒಟ್ಟು | 72.60 |

2) ಈ ಆದೇಶದಲ್ಲಿ ಬಿಡುಗಡೆ ಮಾಡಲಾದ ಅನುದಾನವನ್ನು ಅಧೀಕ್ಷಕ ಅಭಿಯಂತರರು, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವೃತ್ತ, ಬೆಳಗಾಂ, ಮೈಸೂರುರವರು ಮೇಲೆ ಒದಗಿಸಲಾದ ಅನುದಾನದಲ್ಲಿ ಆಯಾ ವೃತ್ತ ಕಛೇರಿಗೆ ಸಂಬಂಧಪಟ್ಟ ಗುಣ ನಿಯಂತ್ರಣ ವಿಭಾಗ, ಇತರೆ ವಿಭಾಗಗಳು ಹಾಗೂ ಉಪ ವಿಭಾಗಗಳ ಕಛೇರಿ ವೆಚ್ಚಗಳಿಗಾಗಿ ನಿಯಮಾನುಸಾರ ಅನುದಾನವನ್ನು ಬಳಸಿಕೊಳ್ಳುವುದು. ಅದರಂತೆ ಕಾರ್ಯಪಾಲಕ ಅಭಿಯಂತರರು, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗ, ಬೆಂಗಳೂರು (ಗ್ರಾಮಾಂತರ) ಹಾಗೂ ಬೆಂಗಳೂರು (ನಗರ) ಇವರುಗಳು ಬೆಂಗಳೂರು ಹಾಗೂ ಗುಲ್ಬರ್ಗಾ ವೃತ್ತ ಕಛೇರಿಗೆ ಸಂಬಂಧಪಟ್ಟ ಗುಣನಿಯಂತ್ರಣ ವಿಭಾಗ, ಇತರೆ ವಿಭಾಗಗಳು ಹಾಗೂ ಉಪ ವಿಭಾಗಗಳ ಕಛೇರಿ ವೆಚ್ಚಗಳಿಗಾಗಿ ನಿಯಮಾನುಸಾರ ಅನುದಾನವನ್ನು ಉಪಯೋಗಿಸಿಕೊಳ್ಳುವುದು. ಮುಂದುವರೆದು, ಈ ಕೆಳಕಂಡ ಸೂಚನೆಗಳನ್ನು ತಪ್ಪದೇ ಅನುಸರಿಸಿ ಮುಂದಿನ ಕ್ರಮವಹಿಸುವುದು.

i) ಖರೀದಿ ಮಾಡುವಾಗ KTPP ನಿಯಮಗಳನ್ನು ಪಾಲಿಸಲು ಸೂಚಿಸಿದೆ.

ii) MCE ಮತ್ತು KFC ನಿಯಮ 15ನ್ನು ಪಾಲಿಸಲು ಸೂಚಿಸಿದೆ.

3) ಸಂಬಂಧಪಟ್ಟ ಅನುಷ್ಠಾನಾಧಿಕಾರಿಗಳು ಈ ಆದೇಶದನ್ವಯ ಬಿಡುಗಡೆ ಮಾಡಿದ ಹಣವನ್ನು ಖಜಾನೆಯಿಂದ ಪಡೆದ ಬಗ್ಗೆ ಖಜಾನೆ ವೋಚರ್ ಸಂಖ್ಯೆ ಮತ್ತು ದಿನಾಂಕವನ್ನು ಆಯುಕ್ತರು, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆ ಬೆಂಗಳೂರು ಇವರಿಗೆ ಸಲ್ಲಿಸಲು ಸೂಚಿಸಲಾಗಿದೆ. ಬೆಂಗಳೂರು(ನಗರ) ಮತ್ತು ಬೆಂಗಳೂರು(ಗ್ರಾಮಾಂತರ) ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗ ಇವರು ಡ್ರಾ ಮಾಡುವ ಅನುದಾನದಿಂದ ತಲಾ ರೂ.3.50 ಲಕ್ಷದಂತೆ ಒಟ್ಟು 2 ಇಂಜಿನಿಯರಿಂಗ್ ವಿಭಾಗಗಳು ಸೇರಿ ರೂ.7.00 ಲಕ್ಷಗಳನ್ನು ಮಾತ್ರ ನೂತನ ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಗುಣನಿಯಂತ್ರಣ ವಿಭಾಗ, ಬೆಂಗಳೂರು ಇದರ ವೆಚ್ಚ ಭರಿಸಲು ನಿಯಮಾನುಸಾರ ಕ್ರಮವಹಿಸಬೇಕು.

4) ಸದರಿ ಅನುದಾನವನ್ನು ಲೆಕ್ಕ ಶೀರ್ಷಿಕೆ "2215-01-001-1-03" ರಡಿ ಭರಿಸುವುದು.

ಈ ಆದೇಶವನ್ನು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖಾ ಆಂತರಿಕ ಆರ್ಥಿಕ ಸಲಹೆಗಾರರ ಸಹಮತಿಯನ್ನು ದಿನಾಂಕ:25-3-2015ರಲ್ಲಿ ಪಡೆದು ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

25.3.15

(ರಾಮಕೃಷ್ಣ)
ಸರ್ಕಾರದ ಉಪ ಕಾರ್ಯದರ್ಶಿ(ಗ್ರಾನೀಸ)
ಗ್ರಾ. ಅ. & ಪಂ. ರಾಜ್ ಇಲಾಖೆ
ಇಮೇಲ್:rk3452000@gmail.com
ಫೋನ್:22240508 ಫ್ಯಾಕ್ಸ್:22233175

<u>ಪ್ರತಿಯನ್ನು</u>

1. ಮಹಾಲೇಖಪಾಲರು, ಕರ್ನಾಟಕ, ಬೆಂಗಳೂರು
2. ಮುಖ್ಯ ಇಂಜಿನಿಯರ್, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆ, ಬೆಂಗಳೂರು
3. ಅಧೀಕ್ಷಕರ ಅಭಿಯಂತರರು, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ 4 ವೃತ್ತ ಕಛೇರಿಗಳು
4. ಕಾರ್ಯಪಾಲಕ ಅಭಿಯಂತರರು, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ 30 ವಿಭಾಗಗಳು
5. ಕಾರ್ಯಪಾಲಕ ಅಭಿಯಂತರರು, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ 2 ಗುಣ ನಿಯಂತ್ರಣ ವಿಭಾಗಗಳು
6. ಉಪ ನಿರ್ದೇಶಕರು, ನೆಟ್‌ವರ್ಕ್ ಮ್ಯಾನೇಜ್‌ಮೆಂಟ್ ಸೆಂಟರ್, ಖಜಾನೆ ಇಲಾಖೆ, 2ನೇ ಮಹಡಿ, ಖನಿಜ ಭವನ, ಬೆಂಗಳೂರು
7. ಜಿಲ್ಲಾ ಖಜಾನಾಧಿಕಾರಿಗಳು, ಬೆಳಗಾಂ / ಮೈಸೂರು / ಬೆಂಗಳೂರು(ಗ್ರಾಮಾಂತರ)/ ಬೆಂಗಳೂರು(ನಗರ)
8. ಮಾಹಿತಿ ಕೇಂದ್ರ, ಗ್ರಾ. ಅ. ಮತ್ತು ಪಂ. ರಾಜ್ ಇಲಾಖೆ, ಬಹುಮಹಡಿಗಳ ಕಟ್ಟಡ, ಬೆಂಗಳೂರು
9. ನಿರ್ದೇಶಕರು, ಯೋಜನಾ ಮಾಹಿತಿ ವಿಭಾಗ, ಗ್ರಾ. ಅ. ಮತ್ತು ಪಂ. ರಾಜ್ ಇಲಾಖೆ, ಬಹುಮಹಡಿಗಳ ಕಟ್ಟಡ, ಬೆಂಗಳೂರು
10. ಆಯುಕ್ತರು, ಗ್ರಾಕುನೀ&ನೈಇಲಾಖೆ ಇವರ ಆಪ್ತ ಸಹಾಯಕರು
11. ರಕ್ಷಾ ಕಡತ/ಹೆಚ್ಚುವರಿ ಪ್ರತಿ